

ಹಳಿಯಾಳ: ಕೆಎಲ್ಎಸ್ ವಿಡಿಐಟಿ ಹಳಿಯಾಳದಲ್ಲಿ ಗಣೇಶ ಚತುರ್ಥಿ ಹಬ್ಬದ ಪ್ರಯುಕ್ತ ಗಾಯನ ನಮನ ಕಾರ್ಯಕ್ರಮ ಗಣೇಶ ವಂದನ ಗುರುವಾರ ನಡೆಯಿತು.

# ವಿಡಿಐಟಿ ಯಲ್ಲಿ ಗಣೇಶ ವಂದನಾ ಕಾರ್ಯಕ್ರಮ



»ಜನಮಾಧ್ಯಮ, ಹಳಿಯಾಳ: ಕೆಎಲ್‌ಎಸ್ ವಿಡಿಐಟಿ ಹಳಿಯಾಳದಲ್ಲಿ ಗಣೇಶ ಚತುರ್ಥಿ ಹಬ್ಬದ ಪ್ರಯುಕ್ತ ಗಾಯನ ನಮನ ಕಾರ್ಯಕ್ರಮ 'ಗಣೇಶ ವಂದನ' ವನ್ನು ಸೆಪ್ಟೆಂಬರ್ 5 ರಂದು ಹಮ್ಮಿಕೊಳ್ಳಲಾಗಿತ್ತು. ಮಹಾವಿದ್ಯಾಲಯದ ಪ್ರಾಚಾರ್ಯ ಡಾ. ವಿ ಎ ಕುಲಕರ್ಣಿ, ಎಲ್ಲಾ ವಿಭಾಗದ ಡೀನ್‌ಗಳು ಹಾಗೂ ವಿಭಾಗ ಮುಖ್ಯಸ್ಥರುಗಳು ಗಣೇಶ ದೇವರ ವಿಗ್ರಹಕ್ಕೆ ಪುಷ್ಪ ಸಮರ್ಪಿಸಿ ವಂದಿಸಿದರು. ಡೀನ್ ಪ್ರೊ. ಸುಧೀರ್ ಕುಲಕರ್ಣಿ ಗಣೇಶ ಚತುರ್ಥಿಯ ಮಹತ್ವವನ್ನು ತಿಳಿಸಿದರು. ಮನೆಗಳಿಗಷ್ಟೇ ಸೀಮಿತವಾಗಿದ್ದ ಹಬ್ಬವನ್ನು ಲೋಕಮಾನ್ಯ ಬಾಲಗಂಗಾಧರ ತಿಲಕ್ ಅವರು ಸಾರ್ವಜನಿಕ ಹಬ್ಬವನ್ನಾಗಿಸಿ ಜನರಲ್ಲಿ ಏಕತೆಯನ್ನು ಮೂಡಿಸಿದ ಪರಿಯನ್ನು ವಿವರಿಸಿದರು. ಗಣೇಶ ವಂದನ ಕಾರ್ಯಕ್ರಮದ ಪ್ರಯುಕ್ತ ವಿದ್ಯಾರ್ಥಿಗಳು ಹಾಗೂ ಬೋಧಕ ಸಿಬ್ಬಂದಿಗಳು ಭಕ್ತಿ ಗೀತೆ ಹಾಗೂ ಭಜನೆಯ ಮೂಲಕ ಭಕ್ತಿ ಸುಧೆ ಹರಿಸಿದರು. ಪ್ರೊ. ಲಕ್ಷ್ಮಿ ಹಟ್ಟಿ ಹೊಳಿ ಹಾಗೂ ಡಾ. ಸ್ನೇಹಾ ಕುಲಕರ್ಣಿ ಕಾರ್ಯಕ್ರಮವನ್ನು ಸಂಯೋಜಿಸಿದ್ದರು. ಮಹಾವಿದ್ಯಾಲಯದ ಸಾಂಸ್ಕೃತಿಕ ವಿಭಾಗದ ವತಿಯಿಂದ ಆಯೋಜಿಸಿದ್ದ ಗಣೇಶ ವಂದನ ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳು ಹಾಗೂ ಬೋಧಕ ಬೋಧಕೇತರ ಸಿಬ್ಬಂದಿಗಳು ಪಾಲ್ಗೊಂಡಿದ್ದರು.

Main Edition Edition
Sep 07, 2024 Page No. 3
Powered by: erelego.com

ಹೊಸ ದಿಗಂತ

ಶುಕ್ರವಾರ, 6 ಸೆಪ್ಟೆಂಬರ್ 2024, ಹುಬ್ಬಳ್ಳಿ

# ಕೆಎಲ್‌ಎಸ್ ವಿಡಿಐಟಿಯಲ್ಲಿ ಗಣೇಶ ವಂದನ

**ಹಳಿಯಾಳ:** ಕೆಎಲ್‌ಎಸ್ ವಿಡಿಐಟಿ ಹಳಿಯಾಳದಲ್ಲಿ ಗಣೇಶ ಚತುರ್ಥಿ ಹಬ್ಬದ ಪ್ರಯುಕ್ತ ಗಾಯನ ನಮನ ಕಾರ್ಯಕ್ರಮ ಗಣೇಶ ವಂದನ ಗುರುವಾರ ನಡೆಯಿತು. ಮಹಾವಿದ್ಯಾಲಯದ ಸಾಂಸ್ಕೃತಿಕ ವಿಭಾಗದ ವತಿಯಿಂದ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಮಹಾವಿದ್ಯಾಲಯದ ಪ್ರಾಚಾರ್ಯ ಡಾ. ವಿ.ಎ.ಕುಲಕರ್ಣಿ, ಎಲ್ಲಾ ವಿಭಾಗದ ಡೀನ್ ಗಳು ಹಾಗೂ ವಿಭಾಗ ಮುಖ್ಯಸ್ಥರುಗಳು ಗಣೇಶ ದೇವರ ವಿಗ್ರಹಕ್ಕೆ ಪುಷ್ಪ ಸಮರ್ಪಿಸಿ ವಂದಿಸಿದರು. ಡೀನ್ ಪ್ರೊ. ಸುಧೀರ್ ಕುಲಕರ್ಣಿ ಗಣೇಶ ಚತುರ್ಥಿಯ ಮಹತ್ವವನ್ನು ತಿಳಿಸಿದರು. ಮನೆಗಳಿಗಷ್ಟೇ ಸೀಮಿತವಾಗಿದ್ದ ಹಬ್ಬವನ್ನು ಲೋಕಮಾನ್ಯ ಬಾಲಗಂಗಾಧರ ತಿಲಕ್ ಅವರು ಸಾರ್ವಜನಿಕ ಹಬ್ಬವನ್ನಾಗಿಸಿ ಜನರಲ್ಲಿ ಏಕತೆಯನ್ನು ಮೂಡಿಸಿದ ಪರಿಯನ್ನು ವಿವರಿಸಿದರು. ಗಣೇಶ ವಂದನ ಕಾರ್ಯಕ್ರಮದ ಪ್ರಯುಕ್ತ ವಿದ್ಯಾರ್ಥಿಗಳು ಹಾಗೂ ಬೋಧಕ ಸಿಬ್ಬಂದಿ ಭಕ್ತಿ ಗೀತೆ ಹಾಗೂ ಭಜನೆಯ ಮೂಲಕ ಭಕ್ತಿ ಸುಧೆ ಹರಿಸಿದರು. ಪ್ರೊ. ಲಕ್ಷ್ಮಿ ಹಟ್ಟಿ ಹೋಳಿ ಹಾಗೂ ಡಾ. ಸ್ನೇಹಾ ಕುಲಕರ್ಣಿ ಕಾರ್ಯಕ್ರಮವನ್ನು ಸಂಯೋಜಿಸಿದ್ದರು.